ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿಯಮಾವಳಿ, 1964ರ ಪ್ರಕಾರ ಜಲಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪ್ರದೇಶಕ್ಕೆ ಮಾತ್ರ ನೀರು ಸರಬರಾಜು ಒದಗಿಸಬೇಕಾಗುತ್ತದೆ. ಮೇಲ್ಕಂಡ ಪ್ರದೇಶಗಳು ಬಿ.ಬಿ.ಎಂ.ಪಿ ವ್ಯಾಪ್ತಿಯ ಹೊರಗಿದ್ದು ಆ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅನುಮೋದನೆಯ ನಂತರ ಹಾಗೂ ಆನೇಕಲ್ ಪುರಸಭೆ, ಕರ್ನಾಟಕ ಗೃಹ ಮಂಡಳಿ ಮತ್ತು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಠೇವಣಿ ಹಣವನ್ನು ಪಾವತಿಸಿದ ನಂತರ ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಸೂರ್ಯನಗರಕ್ಕೆ ನೀರು ಪೂರೈಕೆಯ ಯೋಜನೆಯನ್ನು ಗುತ್ತಿಗೆ ನೀಡಿದ ದಿನಾಂಕದಿಂದ 18 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸರ್ಕಾರದ ಆದಾಯ ಮತ್ತು ವೆಚ್ಚ

242(2476); ಶ್ರೀ ರಾಜೀವ್ ಪಿ. (ಕುಡಚಿ)

ಅ) 2013–14ನೇ ಸಾಲಿನ ಆಯವ್ಯಯದಲ್ಲಿ ಎಲ್ಲಾ ಮೂಲಗಳಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು (ಮೂಲಗಳ ವಿವರ ನೀಡುವುದು);

ಆ) 2013–14ನೇ ಸಾಲಿನ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು (ವಿವರ ನೀಡುವುದು);

ಇ) 2013–14ನೇ ಸಾಲಿನ ಆಯವ್ಯಯದಲ್ಲಿ ಮಾರ್ಚ್ (2014) ತಿಂಗಳವರೆಗೆ ಖರ್ಚು ಮಾಡದೆ ಉಳಿದ ಹಣ ಎಷ್ಟು; ಯಾವ ಯಾವ ಇಲಾಖೆಯಲ್ಲಿ ಖರ್ಚು ಮಾಡದೆ ಉಳಿದಿದೆ; ಇದಕ್ಕೆ ಕಾರಣವೇನು;

ಈ) ಸರ್ಕಾರದ ಒಟ್ಟು ಆದಾಯದಲ್ಲಿ 2013 ರಿಂದ 2014ನೇ ಮಾರ್ಚ್ ತಿಂಗಳವರೆಗೆ ಸರ್ಕಾರಿ ನೌಕರರಿಗೆ ಸಂಬಳ ಮತ್ತು ಭತ್ಯೆಗೆ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು)

ಅ) 2013–14ನೇ ಸಾಲಿನ ಆಯವ್ಯಯದಲ್ಲಿ ಎಲ್ಲಾ ಮೂಲಗಳಿಂದ (ಬಂಡವಾಳ ಸ್ವೀಕೃತಿ ಮತ್ತು ಸಾರ್ವಜನಿಕ ಋಣ ಹೊರತುಪಡಿಸಿ) ಸರ್ಕಾರಕ್ಕೆ ಬಂದ ಆದಾಯದ ವಿವರ ಈ ಕೆಳಕಂಡಂತಿದೆ.

(₹ ಕೋಟಿಗಳಲ್ಲಿ)

ಕ್ರ.ಸಂ.		**2013–14 ಪೂರ್ವ ವಾಸ್ತವಿಕ ಸಂಗ್ರಹಣೆ 1.4.2013 ರಿಂದ 31.3.2014 ರವರೆಗೆ**
(ಅ)	ಸ್ವಂತತೆರಿಗೆರಾಜಸ್ವ	60664
(ಆ)	ಸ್ವಂತತೆರಿಗೆಯೇತರರಾಜಸ್ವ	3970
(ಇ)	ಕೇಂದ್ರತೆರಿಗೆಯಲ್ಲಿರಾಜ್ಯದ ಪಾಲು	13808
(ಈ)	ಕೇಂದ್ರ ಸರ್ಕಾರದ ಸಹಾಯನುದಾನ	8804
	ಒಟ್ಟು ರಾಜಸ್ವ ಜಮೆಗಳು	**87246**

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಬರಬೇಕಾದ ಕೇಂದ್ರ ಸರ್ಕಾರದ ಪಾಲಿನಲ್ಲಿನ ಕೊರತೆ ಹಾಗೂ ವಿಳಂಬದಿಂದಾಗಿ ಮತ್ತು ಕೆಲವು ಇಲಾಖೆಗಳಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೆಲವೊಂದು ತೊಡಕುಗಳಿಂದಾಗಿ ಆಯವ್ಯಯದಲ್ಲಿ ಒದಗಿಸಲಾದ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಮಾಡಲು ಸಾಧ್ಯವಾಗಿರುವುದಿಲ್ಲ. ಇದಲ್ಲದೆ ನಿವೃತ್ತಿಯಿಂದ ತೆರವಾಗುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳಿಂದಲೂ ಸಹ ಅನುದಾನ ಉಳಿತಾಯವಾಗುತ್ತದೆ.

2013–14ನೇ ಸಾಲಿನ ಆಯವ್ಯಯದಲ್ಲಿ ಮಾರ್ಚ್ 2014 ರವರೆಗೆ ಖರ್ಚು ಮಾಡದೆ ಉಳಿದ ಹಣವನ್ನು ಆಯಾ ಇಲಾಖೆಗಳು ಸರ್ಕಾರಕ್ಕೆ ಅಧ್ಯರ್ಪಿಸಿದ ನಂತರ ಸದರಿ ಲೆಕ್ಕವನ್ನು ಮಹಾಲೇಖಪಾಲರು ಅಂತಿಮಗೊಳಿಸಬೇಕಾಗಿರುತ್ತದೆ. ಆದುದರಿಂದ ಸದರಿ ಮಾಹಿತಿಯು ಮಹಾಲೇಖಪಾಲರು ಲೆಕ್ಕವನ್ನು ಅಂತಿಮಗೊಳಿಸಿದ ನಂತರ ಲಭ್ಯವಾಗುತ್ತದೆ.

ಈ) 2013–14ನೇ ಸಾಲಿನ ಪೂರ್ವ ವಾಸ್ತವಿಕ ಲೆಕ್ಕದಂತೆ ಸರ್ಕಾರಿ ನೌಕರರಿಗೆ ಸಂಬಳ ಮತ್ತು ಭತ್ಯೆಗೆ ಮಾಡಲಾದ ವೆಚ್ಚ 17009.79 ಕೋಟಿ ರೂ.ಗಳು.

ಅನುಬಂಧ

2013–14 ನೇ ಸಾಲಿನ ಆಯವ್ಯಯ ಅಂದಾಜು ಮತ್ತು ಪೂರ್ವ ವಾಸ್ತವಿಕ ವೆಚ್ಚ			
		₹ ಲಕ್ಷಗಳಲ್ಲಿ	
D No	**ಬೇಡಿಕೆ**	**BE 13-14**	**PRE ACTUALS 13-14**
01	ಕೃಷಿ ಮತ್ತು ತೋಟಗಾರಿಕೆ	4,37,805.41	3,54,231.01
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	1,90,336.91	1,81,507.58
03	ಆರ್ಥಿಕ	10,48,680.80	9,70,738.49
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	93,397.49	79,946.48
05	ಒಳಾಡಳಿತ ಮತ್ತು ಸಾರಿಗೆ	4,67,996.79	4,30,328.62
06	ಮೂಲಭೂತ ಸೌಕರ್ಯ ಅಭಿವೃದ್ಧಿ	5,685.08	50,093.84
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್	8,21,760.25	5,60,138.78
08	ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ	1,16,127.27	1,55,998.31
09	ಸಹಕಾರ	2,12,603.69	3,37,617.56
10	ಸಮಾಜ ಕಲ್ಯಾಣ	5,04,558.37	4,64,538.29
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	3,46,616.70	2,99,382.99
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	57,315.84	50,675.60
13	ಆಹಾರ ಮತ್ತು ನಾಗರೀಕ ಸರಬರಾಜು	3,50,737.21	3,15,259.05
14	ಕಂದಾಯ	3,79,707.83	3,45,021.83

15	ಮಾಹಿತಿ ತಂತ್ರಜ್ಞಾನ	19,462.75	14,468.44
16	ವಸತಿ	1,36,526.19	1,38,017.72
17	ಶಿಕ್ಷಣ	1,89,227.319	16,84,688.09
18	ವಾಣಿಜ್ಯ ಮತ್ತು ಕೈಗಾರಿಕೆ	8,8495.56	79,493.36
19	ನಗರಾಭಿವೃದ್ಧಿ	7,93,664.63	6,49,945.35
20	ಲೋಕೋಪಯೋಗಿ	5,73,200.17	6,82,005.14
21	ಜಲ ಸಂಪನ್ಮೂಲ	8,11,270.82	7,05,397.80
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	5,42,137.82	4,39,364.95
23	ಕಾರ್ಮಿಕ	55,781.43	43,834.71
24	ಇಂಧನ	6,24,076.27	5,89,327.18
25	ಕನ್ನಡ ಮತ್ತು ಸಂಸ್ಕೃತಿ	26,266.37	23,030.59
26	ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ	56,229.38	79,193.73
27	ಕಾನೂನು	59,430.21	50,598.94
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	14,900.49	13,469.97
29	ಋಣ ಮೇಲುಸ್ತುವಾರಿ	14,34,042.00	10,27,524.63
	TOTAL:	**121,61,086.92**	**1,08,15,839.06**

ಮೂಲ: 2013–14ನೇ ಸಾಲಿನ ಆಯವ್ಯಯ ಸಂಪುಟಗಳಿಂದ ಕ್ರೋಢೀಕರಿಸಲಾಗಿದೆ ಮತ್ತು 2013–14ನೇ ಸಾಲಿನ ಲೆಕ್ಕವು ಪೂರ್ವವಾಸ್ತವಿಕವಾಗಿದ್ದು, ಮಹಾಲೇಖಪಾಲರು ಲೆಕ್ಕವನ್ನು ಅಂತಿಮಗೊಳಿಸಿದ ನಂತರ ಬದಲಾವಣೆ ಆಗುವ ಸಾಧ್ಯತೆಗಳಿವೆ.